ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ 33 ಬಿಎಲ್‌ಡಿ 2011
ಅಡಕ:

ನಿರ್ದೇಶಕರವರ ಕಛೇರಿ.
ತಾಂತ್ರಿಕ ಶಿಕ್ಷಣ ಇಲಾಖೆ.
ಬೆಂಗಳೂರು-560 001.
ದಿನಾಂಕ:23-08-2017.

**ಸುತ್ತೋಲೆ**

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 25 ಹೆಚ್‌ಪಿಟಿ 2017 ದಿನಾಂಕ: 06-07-2017.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಕಛೇರಿ ಆದೇಶ ಸಂಖ್ಯೆ: ಕಾಶಿಇ/37/ತಾಂ.ಶಿ.ಇ/ಸರ್ಕಾರಿ ಪಾಲಿಟೆಕ್ನಿಕ್/ರೂಸ/ಅನುದಾನ/2016-17 ದಿನಾಂಕ:05-08-2017.
3. ಈ ಕಛೇರಿ ಆದೇಶ ಸಂಖ್ಯೆ: ಡಿಟಿಇ 33 ಬಿಎಲ್‌ಡಿ 2011 ದಿನಾಂಕ:23-08-2017.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ 2017-18 ನೇ ಸಾಲಿನ ಆಯವ್ಯಯದ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059 ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ 07 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮೂರನೇ ಕಂತಿನ ಅನುದಾನ ಒಟ್ಟು ರೂ.63,91,315.00 ಗಳನ್ನು ಬಿಡುಗಡೆ ಮಾಡಲು ಮಾಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಅನುಮತಿ ನೀಡಲಾಗಿದೆ ಎಂದು ಆದೇಶಿಸಿದೆ.

ಉಲ್ಲೇಖ (2)ರ ಕಛೇರಿ ಆದೇಶದಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059 (ಸಾಮಾನ್ಯ) ರಡಿಯಲ್ಲಿ 07 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಒಟ್ಟು ರೂ.63,91,315.00 ಗಳನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ನಿಯಮಾನುಸಾರ ಬಿಡುಗಡೆ ಮಾಡಿ ಆದೇಶಿಸಿರುತ್ತಾರೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಸಂಸ್ಥೆಯ ಹೆಸರು | ಒಟ್ಟು |
|---|---|---|
| 1 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ. | 9,31,234.00 |
| 2 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. | 7,81,877.00 |
| 3 | ಡಿಆರ್‌ಆರ್(ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ. | 8,75,151.00 |
| 4 | ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್. | 9,49,364.00 |
| 5 | ಸರ್ಕಾರಿ ಪಾಲಿಟೆಕ್ನಿಕ್,ಗದಗ್. | 9,68,697.00 |
| 6 | ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | 9,12,596.00 |
| 7 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ | 9,72,396.00 |
| | ಒಟ್ಟು | 63,91,315.00 |

ಅದರಂತೆ, ಉಲ್ಲೇಖ (3) ಈ ಕಛೇರಿ ಆದೇಶದಲ್ಲಿ ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಈ ಮೇಲ್ಕಂಡ 07 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ 2017-18ನೇ ಸಾಲಿನ ಆಯವ್ಯಯದ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059-ಯಡಿ ಮೂರನೇ ಕಂತಿನ ಅನುದಾನ ಒಟ್ಟು ರೂ.63,91,315.00/- (ರೂಪಾಯಿ ಅರವತ್ತಮೂರು ಲಕ್ಷದ ತೊಂಭತ್ತೊಂದು ಸಾವಿರದ ಮೂರು ನೂರಾ ಹದಿನೈದು) ಗಳನ್ನು ಮಾತ್ರ ಬಿಡುಗಡೆ ಮಾಡಿ ಆದೇಶಿಸಿದೆ.

ಈ ದಿಸೆಯಲ್ಲಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಉಲ್ಲೇಖ (3)ರ ಆದೇಶದನ್ವಯ ಬಿಡುಗಡೆಯಾದ ಅನುದಾನವನ್ನು "ಅನುದಾನಿತ ಬಿಲ್ಲಿನ ಮೂಲಕ" - ಸಿಟಿಎಸ್ 8 ಖಜಾನೆ -2 (ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆ) ಮೂಲಕ ಸೆಳೆದು ಸಂಬಂಧಪಟ್ಟ ಪ್ರಿನ್ಸಿಪಾಲರ ಹೆಸರಿನಲ್ಲಿ ಪಾವತಿಸ ಬೇಕಾಗಿರುವುದರಿಂದ, ಸದರಿ ಅನುದಾನಿತ ಬಿಲ್ಲುಗಳಿಗೆ ಸಂದಂಧಪಟ್ಟ ಪ್ರಿನ್ಸಿಪಾಲರು ಮೇಲು ಸಹಿ ಮಾಡಲು ದಿನಾಂಕ:30-08-2017 ರಂದು ನಿರ್ದೇಶನಾಲಯದಲ್ಲಿ ಹಾಜರಾಗಬೇಕೆಂದು ತಿಳಿಸಲಾಗಿದೆ.

C.D. Ramaliyah

ಕರಡು ನಿರ್ದೇಶಕರಿಂದ
ಅನುಮೋದಿಸಿದೆ.

ನಿರ್ದೇಶಕರು.
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.

**ಪ್ರತಿ ಇವರಿಗೆ :**

1. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ, ಹಾನಗಲ್, ಗದಗ, ಮಿರ್ಲೆ, ಚಿಂತಾಮಣಿ, ಉಡುಪಿ ಮತ್ತು ಡಿಆರ್‌ಆರ್ (ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ ಇವರ ಮಾಹಿತಿಗಾಗಿ.
2. ಇ-ಆಡಳಿತ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಡಿಟಿಇ ವೆಬ್‌ಸೈಟ್‌ನಲ್ಲಿ ಈ ಮಾಹಿತಿಯನ್ನು ಪ್ರಚುರ ಪಡಿಸಲು ಸೂಚಿಸಲಾಗಿದೆ.